ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂಗಳ ನ್ಯಾಯಾಲಯ, ಚಿಕ್ಕೋಡಿ.

**8 ನೇ ಅಗಸ್ಟ 2024**

**ಸಿ.ಸಿ.ನಂ.114/2024**

| | |
|---|---|
| ದೂರುದಾರರು- | ರಾಜ್ಯದ ಪರವಾಗಿ ಖಡಕಲಾಟ ಪೊಲೀಸ್ ಠಾಣೆ, ಖಡಕಲಾಟ, ತಾಃ ಚಿಕ್ಕೋಡಿ. |
| ವಿರುದ್ಧ | |
| ಆಪಾಧಿತ- | 2. ಶ್ರೀ ಪ್ರಥಮೇಶ ದತ್ತಾತ್ರೇಯ ಮಸ್ಲರ, ವಯಸ್ಸುಃ 23 ವರ್ಷ, ಉಃ ಒಕ್ಕಲುತನ, ವಾಸಃ ಲಿಂಗನೂರ, ತಾಃ ಕಾಗಲ. |

ನಾನು ತೃಪ್ತಿ. ಧರಣಿ, ಬಿ.ಎ. ಎಲ್.ಎಲ್.ಎಂ., ಪ್ರಭಾರ ಎರಡನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ಗಳ ನ್ಯಾಯಾಲಯ, ಚಿಕ್ಕೋಡಿ, ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದನೆಯನ್ನು ಮಾಡುತ್ತಿದ್ದೇನೆ.

## ಆಪಾದನೆ

1) ದಿನಾಂಕ 13-06-2022 ರಂದು 17-15 ಗಂಟೆ ಸಮಯದಲ್ಲಿ ಖಡಕಲಾಟ ಪೊಲೀಸ್ ಠಾಣಾ ಸರಹದ್ದಿಯಲ್ಲಿ ಬರುವ ಪಟ್ಟಣಕುಡಿ ಗ್ರಾಮದ ಶಿವಾಜಿ ಚೌಕ ಸಮೀಪ ಸಾರ್ವಜನಿಕ ಸ್ಥಳದಲ್ಲಿ, 1 ನೇ ಆರೋಪಿ ಅನೀಲ ಶಂಕರ ನಾರೆ ಇತನು ಕಾನೂನು ಬಾಹೀರ ರೀತಿಯಿಂದ ತನ್ನ ಸ್ವಂತ ಲಾಭಕ್ಕೋಸ್ಕರ ಸಾರ್ವಜನಿಕರ ಕಡೆಯಿಂದ ಮುಂಬೈ ಮಟಕಾ ಎಂಬುವ ಓ ಸಿ ಅಂಕಿ ಸಂಖ್ಯೆಗಳ ಮೇಲೆ ಜನರ ಕಡೆಯಿಂದ ಹಣ ಹಚ್ಚಿಸಿಕೊಂಡು ಅನಧಿಕೃತವಾಗಿ ಓ ಸಿ ಅಂಬುವ ಜುಜಾಟದಲ್ಲಿ ತೊಡಗಿದ್ದಾಗ, ಸಾಕ್ಷಿದಾರ -1 ಎಸ್ ವ್ಹಿ ಶಿವಯೋಗಿ ರವರು ತಮ್ಮ ಸಿಬ್ಬಂದಿಯವರಾದ ಸಾಕ್ಷಿದಾರ -4 ಶ್ರೀ ಎಸ್ ಪಿ ಅಸೋದೆ ಮತ್ತು ಸಾಕ್ಷಿದಾರ -5 ಎಸ ಎಲ್ ಗಳತಗಿ ರವರೊಂದಿಗೆ ಪಂಚರಾದ ಸಾಕ್ಷಿದಾರ -2 ಮತ್ತು 3 ರವರ ಸಮಕ್ಷಮ ದಾಳಿ ಮಾಡಿ ಹಿಡಿದು 1 ನೇ ಆರೋಪಿಯನ್ನು ಹಿಡಿದು ಅವರ ಕಡೆಯಿಂದ ಒಂದು ಓ ಸಿ ಅಂಕಿ ಸಂಖ್ಯೆ ಬರೆದ ಚೀಟಿ, ಒಂದು ಬಾಲ್ ಪೆನ್ನ ಮತ್ತು ರೂ.2350-00 ಹಣವನ್ನು ಜಪ್ತುಪಡಿಸಿಕೊಂಡು ವಿಚಾರಣೆ ಮಾಡಿದಾಗ ಆತ ಸದರಿ ಹಣ ಮತ್ತು ಓ ಸಿ

ಚೀಟಿಯನ್ನು 2 ನೇ ಆರೋಪಿಯಾದ ನಿಮಗೆ ಕೊಡುವುದಾಗಿ ಒಪ್ಪಿಕೊಂಡಿದ್ದು, ಆ ಮೂಲಕ 2 ನೇ ಆರೋಪಿಯಾದ ನೀವು ಕರ್ನಾಟಕ ಪೊಲೀಸ ಕಾಯ್ದೆ ಕಲಂ 78(3) ನೇದ್ದರ ಪ್ರಕಾರ ಅಪರಾದ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ-1) ನೀನು ಮೇಲೆ ಹೇಳಿರುವ ಅಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

ಉತ್ತರಃ 2 ನೇ ಆರೋಪಿ ಃ

ಪ್ರಶ್ನೆ-2) ನೀನಗೆ ಅಪಾದನೆಯ ಬಗ್ಗೆ ಏನಾದರೂ ಹೇಳಲಿಕ್ಕೆ ಇದೆಯಾ?

ಉತ್ತರಃ 2 ನೇ ಆರೋಪಿ ಃ

(ಆಪಾದಿತರ ಹೇಳಿಕೆಗಳನ್ನು ನನ್ನ ಸಮ್ಮುಖದಲ್ಲಿ ಪಡದುಕೊಂಡಿದ್ದು ಸದರಿ ಹೇಳಿಕೆಗಳು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.)

ಪ್ರಭಾರ **2** ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.